International Journal of Kannada Research 2024; 10(4): 38-43

International Journal of Kannada Research
www.kannadajournal.com

ISSN: 2454–5813
IJKR 2024; 10(4): 38-43
© 2024 IJKR
www.kannadajournal.com
Received: 05-08-2024
Accepted: 15-09-2024

**ಪ್ರಭುದೇವ ಸಿ**
ಸಂಶೋಧನಾ ವಿದ್ಯಾರ್ಥಿ
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ
ರಾಜಾನುಕುಂಟೆ, ಬೆಂಗಳೂರು,
ಕರ್ನಾಟಕ, ಭಾರತ

**ಡಾ. ಶಬೀನಾ**
ಸಹಾಯಕ ಪ್ರಾಧ್ಯಾಪಕರು,
ಮಾರ್ಗದರ್ಶಕರು
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ
ರಾಜಾನುಕುಂಟೆ, ಬೆಂಗಳೂರ,
ಕರ್ನಾಟಕ, ಭಾರತ

**Corresponding Author:**
**ಪ್ರಭುದೇವ ಸಿ**
ಸಂಶೋಧನಾ ವಿದ್ಯಾರ್ಥಿ
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ
ರಾಜಾನುಕುಂಟೆ, ಬೆಂಗಳೂರು,
ಕರ್ನಾಟಕ, ಭಾರತ

# ಛಲವಾದಿ ಸಮುದಾಯದ ಕುಲಮೂಲದ ಪಾರಂಪರಿಕ ಹಿನ್ನೋಟ

**ಪ್ರಭುದೇವ ಸಿ, ಡಾ. ಶಬೀನಾ**

**DOI:** https://doi.org/10.22271/24545813.2024.v10.i4a.1051

**ಪೀಠಿಕೆ**
ಛಲವಾದಿ ಸಮುದಾಯವು ತಮ್ಮದೆಯಾದ ವಿಶಿಷ್ಟ ಹಾಗೂ ವಿಭಿನ್ನವಾದ ಜೀವನ ಶೈಲಿಗೆ ಸಂಬಂಧಿಸಿದ ನಂಬಿಕೆಗಳು, ಆಚರಣೆಗಳು, ರೂಢಿ, ಸಂಪ್ರದಾಯಗಳು, ನಡೆ–ನುಡಿಗಳು, ಕುಲಕಸುಬುಗಳು ಹೀಗೆ ಇನ್ನೂ ಮುಂತಾದ ವೃತ್ತಿಗಳನ್ನು ನಂಬಿಕೊಂಡು ಬದುಕುತ್ತಿರುವ ಈ ಸಮುದಾಯವು ಇವತ್ತಿಗೂ ಪ್ರಬಲವಾದ ಮೇಲ್ವರ್ಗದವರ ದಬ್ಬಾಳಿಕೆಗೆ ಸಿಲುಕಿ ನಲುಗುತ್ತಿರುವ ಇವರು ಜೀವನ ಪೂರ್ತಿ ಶೋಷಣೆಯಲ್ಲಿ ಸೊರಗುತ್ತಿದ್ದಾರೆ. ಧ್ವನಿ ಇದ್ದರೂ ಧ್ವನಿ ಎತ್ತಿ ಮಾತನಾಡುವ ಶಕ್ತಿ ಇಲ್ಲದೆ ಸಮಾಜದಿಂದ ನಿರ್ಲಕ್ಷಿಸಲ್ಪಟ್ಟ ಗುಂಪಿಗೆ ಸೇರಿದವರಾಗಿದ್ದಾರೆ. ಬಡತನ, ಅಜ್ಞಾನ, ಅನಕ್ಷರತೆ, ಮೌಢ್ಯಗಳಂತಹ ಗೊಡ್ಡು ಸಂಪ್ರದಾಯಕ್ಕೆ ಜೋತು ಬಿದ್ದು ಅನೇಕ ಶೋಷಣೆಗಳಂತಹ ಮಾನಸಿಕ ರೋಗಗ್ರಸ್ತ ಒತ್ತಡದಿಂದ ಬಿಡಿಸಿಕೊಳ್ಳಲೂ ಆಗದೆ ಇರುವುದು ಅತ್ಯಂತ ದೊಡ್ಡ ದುರಂತವೇ ಸರಿ. ಈ ದೃಷ್ಟಿಕೋನದ ಹಿನ್ನೆಲೆಯಲ್ಲಿ ಇಂತಹ ಮಹತ್ವದ ಅಧ್ಯಯನಗಳಿಂದಾದರೂ ಛಲವಾದಿ ಸಮುದಾಯದ ಮೇಲೆ ಬೆಳಕು ಚೆಲ್ಲಬಹುದು ಹಾಗೂ ಅವರ ಸಂಸ್ಕೃತಿಯಲ್ಲಿನ ಆಚಾರ–ವಿಚಾರಗಳು, ಸಂಪ್ರದಾಯಗಳನ್ನು ಅಧ್ಯಯನ ಮಾಡಿ ಅವರ ಬದುಕಿನ ಮಜಲನ್ನು ಹೊರ ಪ್ರಪಂಚಕ್ಕೆ ಪರಿಚಯಿಸುವ ಅವಶ್ಯಕತೆ ಇದೆ.

**ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ**
ಸಮಾಜದಲ್ಲಿ ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ದಿನದಿಂದ ದಿನಕ್ಕೆ ಹೊಸ–ಹೊಸ ಆಲೋಚನೆಗಳೊಂದಿಗೆ ವಿಕಾಸಗೊಂಡು ಬೆಂಕಿ ಬೇಸಾಯದಿಂದ ತನ್ನ ವೃತ್ತಿಯನ್ನು ವೃದ್ಧಿಸಿಗೊಂಡು ಸ್ವಾವಲಂಬಿ ಜೀವನಕ್ಕೆ ಅಣಿಯಾಗುತ್ತಾ ಸಂಘಜೀವಿಯಾಗುತ್ತಾ ಮನುಷ್ಯ ಬದಲಾಗುತ್ತಾನೆ. ಮನುಷ್ಯನ ಬದಲಾವಣೆಯು ಮುಂದೆ ಜಾತಿ, ಭೇದ–ಭಾವ ತಾರತಮ್ಯಗಳಾಗಿ ಪರಿವರ್ತನೆಗೊಳ್ಳುತ್ತಾ ಸಾಗುವ ಮಾರ್ಗ ಭಿನ್ನವಾಯಿತು. ಮನುಷ್ಯನ ವೃತ್ತಿ ಬದುಕಿನ ಆಧಾರದಿಂದಲೇ ಸಮಾಜದಲ್ಲಿ ಭಿನ್ನ–ವಿಭಿನ್ನವಾದ ಬಗೆಬಗೆಯ ಹೊಸ ಮೌಲ್ಯಗಳೊಂದಿಗೆ ಸಂಪ್ರದಾಯ, ಆಚಾರ–ವಿಚಾರ, ನಡೆ–ನುಡಿ ಹಲವು ರೀತಿಯಲ್ಲಿ ದಿನದಿಂದ ದಿನಕ್ಕೆ ವಿಶಿಷ್ಟವಾದ ಹಾಗೂ ವಿಭಿನ್ನವಾದ ಬದಲಾವಣೆಯೊಂದಿಗೆ ರೂಪಗೊಂಡವು. ವ್ಯಕ್ತಿಯ ಕಾಯಕದ ಮೂಲಕವೇ ಬದುಕಿನ ವೈಶಿಷ್ಟ್ಯತೆಗಳು ಪರಿವರ್ತನೆಗೊಂಡು, ಅವನು ಅನುಸರಿಸುವ, ಆಚರಿಸುವ, ಪರಿಪಾಲಿಸುವ, ಆಚರಣೆಗಳ ಪರಂಪರೆಯನ್ನು ತಿಳಿದುಕೊಳ್ಳಲು ಅನುಕೂಲವಾಯಿತು.

ಭಾರತೀಯ ಸಂಪ್ರದಾಯದ ವ್ಯವಸ್ಥೆಯಲ್ಲಿ ಜಾತಿ ಕುಲ ಧರ್ಮಗಳ ಆಧಾರಗಳ ಮೇಲೆ ವೈಶಿಷ್ಟತೆಗಳು ಇಂದಿಗೂ ಬದಲಾವಣೆ ಕಂಡಿಲ್ಲ. ಏಕೆಂದರೆ, ಭಾರತೀಯ ಪರಂಪರೆಯಲ್ಲಿ ಹಾಗೂ ನಂಬಿಕೆಯ ಹೆಸರಿನಲ್ಲಿ ಛಲವಾದಿ ಸಮುದಾಯದ ಮುಗ್ಧ ಜನರನ್ನು ಭಾವನಾತ್ಮಕವಾಗಿ ಅವರನ್ನು ಸೆಳೆದುಕೊಂಡಿದೆ.

ನಮ್ಮ ದೇಶದ ಹಲವು ಸಮಸ್ಯೆಗಳಲ್ಲಿ ಜಾತಿ ಸಮಸ್ಯೆ ಅತ್ಯಂತ ಘನಘೋರವಾಗಿ ಕಾಡುತ್ತಿದೆ. ಸಂವಿಧಾನಶಿಲ್ಪಿ ಡಾ. ಬಾಬಾಸಾಹೇಬರ ಸಂವಿಧಾನ ಜಾತ್ಯಾತೀತತೆಯ ಮಂತ್ರ ಸಾರಿದರು ಮೂಟಿದೇಳುವ ಪಟ್ಟಬದ್ಧ ಹಿತಾಸಕ್ತಿಗಳ ತಂತ್ರಗಳು, ಕುತಂತ್ರಗಳು ಕಣ್ಣಿಗೆ ಕಾಣದಂತೆ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಜಾತಿಯ ಮೇಲೆ ಬಹು ದೊಡ್ಡ ಪರಿಣಾಮ ಬೀರುತ್ತಿದೆ.

ಮೂಢನಂಬಿಕೆಳಂತಹ ಆಚರಣೆಗಳು ಇನ್ನೂ ಜೀವಂತವಾಗಿವೆ. ಆ ಮೌಢ್ಯಗಳು ಮನುಷ್ಯನನ್ನು ಭಾವನಾತ್ಮಕವಾಗಿ ಬಂದಿಸಿವೆ. ಸಮಕಾಲೀನ ಸಂದರ್ಭದಲ್ಲಿ ಸಂಶೋಧನೆಗಳ ಅನಿವಾರ್ಯತೆ ಇದೆ. ಅದಕ್ಕಾಗಿಯೇ ಈ ಸಂಶೋಧನೆಯ ಅಧ್ಯಯನದ ಮೂಲ ಉದ್ದೇಶ ಮತ್ತು ಗುರಿ ಬಹಳ ಪ್ರಮುಖವಾಗುತ್ತದೆ. ಅಂತಹ ಜಾತಿ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡುವ ಮೂಲಕ ಲಭ್ಯವಾದ ವಸ್ತು ವಿಷಯಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಿ ವಿಶ್ಲೇಷಣೆ ಮಾಡಲಾಗಿದೆ.

ಛಲವಾದಿ ಸಮುದಾಯದ ಕುಲದ ಮೂಲ ಹಾಗೂ ಜನ–ಜೀವನದ ಕ್ರಮ ಅವರ ಹಿನ್ನೆಲೆಯನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು, ಛಲವಾದಿ ಸಮುದಾಯದವರ ಜೀವನದ ಸ್ಥಿತಿಗತಿಯನ್ನು ಕುರಿತಾದ ಅವಲೋಕನ ಮಾಡುವುದು ಆ ಸಮುದಾಯದಗಳ ಪ್ರಸ್ತುತ ಸಂದರ್ಭದಲ್ಲಿನ ಬದಲಾವಣೆ ಹಾಗೂ ಗತಕಾಲದ ಬದುಕಿನ ಬವಣೆಯನ್ನು ಹೇಗೆ ವಿಸ್ತಾರಗೊಂಡಿತು ಎಂಬ ವಿಚಾರವನ್ನು ಹಾಗೂ ಅವರ ಸಾಮಾಜಿಕ ಜೀವನದಲ್ಲಿನ ಸಾಂಸ್ಕೃತಿಕ ಸ್ಥಿತ್ಯಾಂತರಗಳಿಗೆ ಸಂಬಂಧಿಸಿದ ವಸ್ತು ವಿಷಯಗಳ ಮಾಹಿತಿಯನ್ನು ವಿವರವಾಗಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳುವುದಾಗಿದೆ.

ಭಾರತದ ಜಾತಿ ವ್ಯವಸ್ಥಯ ಅಧ್ಯಯನದ ಸಂದರ್ಭದಲ್ಲಿ ಕರ್ನಾಟಕದ ಛಲವಾದಿ ಸಮುದಾಯ ಸಮಾಜದಲ್ಲಿನ ಕಟ್ಟಕಡೆಯ ಸಮುದಾಯವಾಗಿ ಅಪಮಾನ, ಅನ್ಯಾಯ, ಶೋಷಣೆ, ಅಸಮಾನತೆಯ ಕೂಪದೊಳಗೆ ಬದುಕುತ್ತಿರುವ ಸಂದರ್ಭದಲ್ಲಿ ಆ ಸಮುದಾಯದ ಮೇಲೆ ಅವೈಜ್ಞಾನಿಕ ಮೂಢನಂಬಿಕೆಯ ಛಾಯೆ ದಟ್ಟವಾಗಿ ಆವರಿಸಿಕೊಂಡು ಬಿಟ್ಟಿದೆ.

## ಅಧ್ಯಯನದ ಉದ್ದೇಶ

ಶತಶತಮಾನದಿಂದಲೂ ಯಾವುದಾದರೊಂದು ಕಾರಣದಿಂದ ಸಮಾಜದಲ್ಲಿ ನಿಸ್ವಾರ್ಥದಿಂದ ಕರುಣಾಮಯಿಗಳಾಗಿ ಬದುಕುತ್ತಾ ಬಂದಿರುವ ಛಲವಾದಿ ಸಮುದಾಯದ ಜನರು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸಮಾಡುತ್ತಿರುವ ಛಲವಾದಿ ಸಮುದಾಯದ ಜನರ ಜೀವನದ ಸ್ಥಿತಿಗತಿಯನ್ನು ಕೂಲಂಕೂಶವಾಗಿ ಮತ್ತು ಸಾಂಸ್ಕೃತಿಕವಾಗಿ ಅವಲೋಕನ ಮಾಡಿ. ಛಲವಾದಿ ಸಮುದಾಯಗಳ ಕುಲಮೂಲಗಳು, ನಂಬಿಕೆಗಳು, ಆಚರಣೆಗಳು, ಸಂಬಂಧಗಳು, ನಡೆ–ನುಡಿಗಳು, ರೂಢಿ ಸಂಪ್ರಾದಾಯಗಳು, ಕುಲಕಸುಬುಗಳು, ಉಡುಗೆ–ತೊಡುಗೆಗಳು, ಆಹಾರ–ಪದ್ದತಿಗಳು, ವಿಧಿ–ವಿಧಾನಗಳು ಇತರರಿಗಿಂತ ಹೇಗೆ ವಿಭಿನ್ನವಾಗಿವೆ, ಎಂಬುದನ್ನು ಛಲವಾದಿ ಸಮುದಾಯದಲ್ಲಿನ ಬದುಕಿನ ಆಯಾಮಗಳನ್ನು ಮತ್ತು ಅವರ ಸಂಸ್ಕೃತಿಯ ಹಿನ್ನೆಲೆಯನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು ವಿಶ್ಲೇಷಣೆ ಮಾಡಿ ಮರೆಮಾಚಿದ ಹತ್ತು ಹಲವು ವಿಷಯಗಳ ಬಗೆಗಿನ ಭಿನ್ನತೆಗಳ ಬಗ್ಗೆ ಅಧ್ಯಯನ ಮಾಡಿ ಇಲ್ಲಿ ದಾಖಲಿಸುವ ಜರೂರಿದೆ ಆದರೆ ಇಲ್ಲಿ ಮುಖ್ಯವಾಗಿ ಕುಲ ಮೂಲಗಳನ್ನು ಮಾತ್ರ ಇಲ್ಲಿ ದಾಖಲಿಸುವ ಪ್ರಯತ್ನ ನನ್ನದಾಗಿದೆ

## ಅಧ್ಯಯನದ ವ್ಯಾಪ್ತಿ

ಛಲವಾದಿ ಸಮುದಾಯದ ಕುಲದ ಮೂಲಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು ಅಲ್ಲಿ ಸಿಗುವ ಆಕರಗಳನ್ನು ಕ್ರೂಢೀಕರಿಸಿ ಎಲ್ಲ ಕಾಲಘಟ್ಟದಿಂದಲೂ ಈ ಜನಾಂಗ ಹೇಗೆ ರೂಪಗೊಂಡಿದೆ ಎಂಬುದನ್ನು ಸಂಗ್ರಹಿಸಲಾಗಿದೆ.

## ಅಧ್ಯಯನದ ಮಹತ್ವ

ಈ ಅಧ್ಯಯನವು ಹಲವು ಆಯಾಮಗಳಿಂದ ಮಹತ್ವವನ್ನು ಪಡೆದುಕೊಳ್ಳುತ್ತದೆ. ಪ್ರಜಾಪ್ರಭುತ್ವದ ತಳಹದಿಯ ಮೇಲೆ ರೂಪಗೊಂಡ ಆಧುನಿಕ ಭಾರತದಲ್ಲಿಯೂ ಕೂಡ ಸಮಾಜದ ಕೆಳವರ್ಗದವರ ನೋವು, ಸಂಕಟ, ಅತಾಸೆ, ಹಸಿವು, ಶೋಷಣೆ, ದಬ್ಬಾಳಿಕೆ, ದೌರ್ಜನ್ಯ ಹೀಗೆ ಇತ್ಯಾದಿ ಸಂಕಷ್ಟಗಳ ನಡುವೆಯೂ ತಳಮೂಲ ಸಮುದಾಯಗಳು ತಲತಲಾಂತರಗಳಿಂದ ಇಂತಹ ಅಪಮಾನಗಳನ್ನು ಸಹಿಸಿಕೊಂಡು ಬಂದ ರೀತಿಯನ್ನು ಸಮುದಾಯದ ಹಿರಿಯರ ಅನುಭವಗಳನ್ನು ತಿಳಿದುಕೊಳ್ಳುವಲ್ಲಿ ಈ ಅಧ್ಯಯನವು ಮಹತ್ವ ಪಡೆಯುತ್ತದೆ. ಸಮಾಜದಲ್ಲಿ ಛಲವಾದಿ ಸಮುದಾಯಗಳ ಜೀವನ ಸ್ಥಿತಿಗಳಗಳ ಬಗೆಗಿನ ನಿಜ ನೋವಿನ ಸಂಗತಿಗಳನ್ನು ಅನಾವರಣದ ಹಿನ್ನೆಲೆಯಿಂದ ಮಹತ್ವ ಪಡೆಯುತ್ತದೆ. ಛಲವಾದಿ ಸಮುದಾಯಗಳ ಆಚಾರ–ವಿಚಾರ, ರೂಢಿ–ಸಂಪ್ರಾದಾಯ, ನಡೆ–ನುಡಿ ಹೀಗೆ ಹತ್ತು ಹಲವು ವಿಷಯಗಳ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗುವುದು. ಆ ಕಾರಣಕ್ಕಾಗಿ ಈ ಅಧ್ಯಯನವು ಮಹತ್ವ ಪಡೆಯುತ್ತದೆ. ಮತ್ತು ಅಧ್ಯಯನಯದ ಅಗತ್ಯೆಯ ಬಗ್ಗೆ ಚರ್ಚೆಗೆ ಒಳಪಡಿಸಲಾಗುತ್ತದೆ.

## ಛಲವಾದಿ ಸಮುದಾಯದ ಸಂಸ್ಕೃತಿಯ ಪಕ್ಷಿನೋಟ

ಪ್ರಾಚೀನ ಇತಿಹಾಸದ ಸಂದರ್ಭದಲ್ಲಿ ಒಂದು ಅನನ್ಯ ಪ್ರಾಕೃತಿಕ ರಚನೆ ವೈವಿಧ್ಯಮಯವಾದ ತಳಹದಿಯ ಮೇಲೆ ರೂಪಗೊಂಡು ಜನ–ಜೀವನ ಹಲವು ವಿಭಿನ್ನ ಸ್ತರಗಳಲ್ಲಿ ಅನೇಕ ಸಂಪ್ರದಾಯಗಳು ಹಾಗೂ ಆಚರಣೆಗಳು ಮರಾತನ ಪರಂಪರೆಯ ಹಾಗೂ ನೆರೆಹೊರೆಯ ದೇಶಗಳ ಪರಂಪರೆಯ ಪ್ರಭಾವ ದಟ್ಟವಾಗಿ ಭಾರತೀಯ ಸಂಸ್ಕೃತಿಯ ಸಿಂಧೂ ನಾಗರೀಕತೆಯ ತಳಹದಿಯು ಆರಂಭಗೊಂಡಿದೆ.

ಛಲವಾದಿ ಸಮುದಾಯದಲ್ಲಿನ ಜನನ ಸಂಬಂಧಿ ಕಾರ್ಯಗಳು, ಸಂಪ್ರದಾಯಿಕ ವಿಧಿ–ವಿಧಾನಗಳಲ್ಲಿನ ಕಾರ್ಯಗಳು, ಸಂಪ್ರದಾಯಿಕ ಆಚರಣೆಗಳು, ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಯಲ್ಲಿನ ನಂಬಿಕೆಗಳು, ಜನನ ಮರಣದಲ್ಲಿನ ನಂಬಿಕೆಗಳು, ಧರ್ಮದ ಹಬ್ಬ ಹರಿದಿನಗಳ ಆಚರಣೆಗಳು ಹಾಗೂ ಪ್ರಸ್ತುತ ಸಮಾಜದಲ್ಲಿ ಹೇಗೆ ಸ್ಥಿತ್ಯಂತರ ಹೊಂದುತ್ತಿದ್ದಾರೆ ಎಂಬುದನ್ನು ಇಂದಿನ ಆಧುನಿಕ ಜಗತ್ತಿನಲ್ಲಿ ಯಾವೆಲ್ಲ ಸವಾಲುಗಳನ್ನು ಮೆಟ್ಟಿ ನಿಲ್ಲುತ್ತಿದ್ದಾರೆ, ಛಲವಾದಿ ಸಮುದಾಯ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮತ್ತು ಬೌದ್ಧಿಕವಾಗಿ ಹೀಗೆ ಇನ್ನೂ ಅನೇಕ ವಿಷಯಗಳಲ್ಲಿ ತಮ್ಮ ಅಸ್ಥಿತ್ವದ ಸ್ಥಿತಿಗತಿಯನ್ನು ಹೊಲೆಯ/ಛಲವಾದಿ ಎಂದರೆ ಹೊಲಸು ತಿನ್ನುವವನು ಎಂಬ ಹೆಸರಿನಿಂದ ಇನ್ನೂ ಸಮಾಜದ ಮೇಲ್ ಸ್ತರಕ್ಕೆ ಬರಲು ಒದ್ದಾಡುತ್ತಿದೆ. ಈ ಹಿನ್ನೆಲೆಯನ್ನು ಇಟ್ಟುಕೊಂಡು ಈ ಸಮುದಾಯದ ಮೂಲ ಗ್ರಹಿಕೆಗಳ ಅವಶ್ಯಕತೆ ಇದೆ.

## ಛಲವಾದಿ ಸಮುದಾಯದ ಕುಲಮೂಲದ ಇತಿಹಾಸ

### ಛಲವಾದಿ ವ್ಯೂತ್ಪತ್ತಿ

ಛಲವಾದಿ ಎಂದರೆ ಛಲವಂತ, ಹಠಗಾರ, ಪಟ್ಟುಹಿಡಿಯುವ ಮೊಂಡುತನದ ಮಾತುಗಾರ, ಛಲದಿಂದ ಬದುಕುವವನು, ದೃಢ ಸಂಕಲ್ಪಯುಳ್ಳವನು, ನಿಷ್ಠೆಯಿಂದ ಶಿವನ ಸೇವೆ ಮಾಡುವವನು, ವಾದ್ಯಗಳನ್ನು ಛಲದಿಂದ ವಾದನ ಮಾಡುವುದರಿಂದ ಛಲವಾದಿ ಎಂಬ ಹೆಸರು ಬಂದಿದೆ. ಇದೊಂದು ನಾಮಪದ, ಛಲವನ್ನು ಹಿಡಿದವನು ಎಂಬ ಅರ್ಥ ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಬಳಕೆಯಾಗಿದೆ. ನಲ್ಲಿಕಟ್ಟೆ ಸಿದ್ದೇಶ್ ರವರು ದಲಿತ ವಾಯ್ಸ್ ಪತ್ರಿಕೆಯಲ್ಲಿ ವೀರಶೈವ ಪೀಠಾಧ್ಯಕ್ಷರಿಂದ ದೀಕ್ಷೆ ಪಡೆದು ಶರಣ ಮಾರ್ಗದಲ್ಲಿ ನಡೆಯುವವನು, ಬಸವ ತತ್ವ ಪ್ರಸಾರ ಮಾಡುವುದು ಛಲವಾದಿಯ ನಿಯಮವಾಗಿತ್ತು ಎಂದಿದ್ದಾರೆ. ಒಟ್ಟಾರೆಯಾಗಿ

ಛಲದಂಕ ಮಲ್ಲನ ವಂಶವದವನು ಎಂಬುದು ರೂಢಿಯಲ್ಲಿದೆ. ಪೂರ್ವದಿಂದಲೂ ಈ ಸಮುದಾಯ ರಣಕಹಳೆಯನ್ನು ಊದುತ್ತಿದ್ದರು ಎಂಬ ನಂಬಿಕೆ.

ಮುಖ್ಯವಾಗಿ ಕನ್ನಡ, ತೆಲುಗು ಮತ್ತು ಉರ್ದು ಹಿಂದಿ ಈ ರಾಜ್ಯದಲ್ಲಿ ಮಾತನಾಡುವ ಭಾಷೆಯಾಗಿವೆ. ಹಿಂದೂ ಧರ್ಮ, ಇಸ್ಲಾಂ ಧರ್ಮ ಜೈನ್ ಧರ್ಮ ಈ ರಾಜ್ಯದಲ್ಲಿ ತತ್ವ ಧರ್ಮಗಳನ್ನು ಅನುಸರಿಸುತ್ತವೆ. ಸ್ವಾತಂತ್ರ್ಯ ಪೂರ್ವದ 'ಗೆಜೆಟಿಯರ್‌ಗಳು' ದಕ್ಷಿಣ ಭಾರತದಲ್ಲಿ ಹೆಚ್ಚು ಭೂ ಹಿಡುವಳಿ ಹೊಂದಿದ್ದ ಸಮುದಾಯಗಳ ಪೈಕಿ ಛಲವಾದಿ (ಹೊಲಯ) ಮಾದಿಗ ಸಮುದಾಯಗಳ ಪಾಲು ಹೆಚ್ಚಿತ್ತು, ಎಂಬುದನ್ನು ದಾಖಲಿಸಿದೆ. ಹಂಪಿಯ ಹೆಳವರ ದಾಖಲೆಗಳ ಪ್ರಕಾರ ಹಂಪಿ ಪ್ರದೇಶದಲ್ಲಿ ಅತೀ ಹೆಚ್ಚು ಭೂ ಹಿಡುವಳಿ ಇದ್ದದ್ದು ಹಾಗೂ ಛಲವಾದೇರು (ಹೊಲಯರು) ಕೈಯಲ್ಲಿತ್ತು ಎಂದು ತಿಳಿದು ಬಂದಿದೆ. ಹಾಗೂ ಕರ್ನಾಟಕದ ಕೀರ್ತಿ ಪತಾಕೆಯನ್ನು ಉಪಖಂಡದಿಂದಾಚೆಗೂ ಹರಡಿಸಿದ್ದ ಚಾಲುಕ್ಯರು ಎಂಬುದನ್ನು ಇತಿಹಾಸವೇ ಹೇಳುತ್ತದೆ. 'ಹರತೀ ಕುಲಸ್ಥರು' ಎಂದರೆ, ಹೊಲತಿ ಮಕ್ಕಳು ಎಂದಾರ್ಥ. ಚೋಳರನ್ನು ಸಹ ಇಂಥದ್ದೇ ಕುಲವಾಚಿ ಪದವಾದ 'ಪಾರತಿ' ಕುಲಸ್ಥರು ಎಂದು ಇತಿಹಾಸಕಾರರು ಗುರುತಿಸುತ್ತಾರೆ. ಚೋಳರಲ್ಲಿ ಕೆಲವು ಅರಸರ ಶಾಸನಗಳಲ್ಲಿ ತಮ್ಮನ್ನು ತಾವು 'ಕರವ ಕುಲಸ್ಥರು' ಎಂದು ಬರಸಿದ್ದಾರೆ. ಚಾಲುಕ್ಯರ (ಹರತೀ) ಕುಲ ಹಾಗೂ ಚೋಳರ 'ಕರವ' ಕುಲ ಈಗಲೂ ಕೆಲವು ಹೊಲಯರಲ್ಲಿ ಇರುವುದನ್ನು ಕಾಣಬಹುದು. ಕರ್ನಾಟಕ, ತಮಿಳುನಾಡು, ಹಾಗೂ ಆಂಧ್ರದ ಗಡಿಗಳನ್ನು ಕೂಡುವ ಕೆಲವು ಪ್ರದೇಶವನ್ನು 'ಕೊರವ ನಾಡು' ಎನ್ನಲಾಗುತ್ತದೆ. ಈ ಮೂರು ರಾಜ್ಯಗಳಲ್ಲಿ ಈಗಲೂ ಈ ಕುಲಸ್ಥರ ಹೆಸರಿನ ಹೊಲಯರು ಕಾಣಬಹುದು. ಅಲ್ಲದೇ ಚಿತ್ರದುರ್ಗ, ಉತ್ತರ ಕನ್ನಡ ಹಾಗೂ ಹಳೆ ಮೈಸೂರು ಭಾಗಗಳಲ್ಲಿಯೂ 'ಹರತೀ' ಕುಲಸ್ಥರ ಹೊಲಯರನ್ನು ಕಾಣಬಹುದು. ಈ ಹಿಂದೆ ಕೊಂಕಣ ಸೀಮೆಯಾದ ಉತ್ತರ ಕನ್ನಡವನ್ನು ಹೊಲತಿ ಕೋಟೆ ಎಂದೇ ಕರೆಯಲಾಗುತ್ತಿತ್ತು.

ಛಲವಾದಿ (ಹೊಲಯ) ಪದದ ನಿಷ್ಪತ್ತಿಗಳ ಕುರಿತಾಗಿಯೂ ಅಧ್ಯಯನಕ್ಕೆ ಪೂರಕವಾದ ಕಲವು ವಿಷಯಗಳು ಚರ್ಚಿಸಲಾಗುತ್ತದೆ. ಛಲವಾದಿ (ಹೊಲಯ) ಎಂಬುದಕ್ಕೆ 'ಹೊಲದವ' ಎಂಬ ಸರಳವಾದ ಅರ್ಥವಿದೆ. ಹೊಲದವನು ಹೊಲಯ, ಹೊಲದ ಒಡೆಯ ಹೊಲಯ ಎಂಬಂತೆ ಕೃಷಿ ಕಾಯಕದ ನೆಲದ ವಾರಸುದಾರಿಕೆಯ ಅರ್ಥವನ್ನು ಹೊಲಯ ಪದ ನೀಡುತ್ತದೆ. 'ಮಣ್ಣಿನ ಮಗ' ಎಂಬ ಅರ್ಥವನ್ನು ಸಹ ನೇರವಾಗಿ ಕೊಡಬಲ್ಲ ಸಮುದಾಯ ಸೂಚಕ ಪದವೇ 'ಹೊಲಯ'. 'ಹೊಲಯ' ಎಂಬುದಕ್ಕೆ ಮೂಲ ಪದ ಹಳಗನ್ನಡದ 'ಪುಲಯ' ಎಂಬ ಪದ ಇಲ್ಲಿ 'ಪುಲ್' ಎಂಬ ಅಚ್ಚಗನ್ನಡ ಪದಕ್ಕೆ ಸಂಸ್ಕೃತದಲ್ಲಿ 'ಮಹಾ' ಎಂದು ಪ್ರಾಕೃತದಲ್ಲಿ 'ಮಾ' ಎಂದು ಅರ್ಥ ಕೊಡುತ್ತದೆ. ಅಚ್ಚ ಗನ್ನಡದ 'ಪುಲಯ' ಎಂಬ ಪದಕ್ಕೆ 'ಪುಲುಸು'ಎಂಬುದು ಮೂಲ ಪದ. ಇದರ ಅರ್ಥ ಹೆಚ್ಚಾಗು, ಹಸನಾಗು, ಸಮೃದ್ಧವಾಗು ಎಂದು. ಇದೇ ಆಧಾರದ ಮೇಲೆ ಹೊಲಯರನ್ನು ಆದಿ ಬೇಸಾಯಗಾರರು ಎನ್ನಲಾಗಿದೆ. ಕರ್ನಾಟಕದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ ಮೈಸೂರು ಭಾಗದಲ್ಲಿ ಆದಿ ಕರ್ನಾಟಕ (ಬಲಗೈ) ಬಳ್ಳಾರಿ ಬಾಗದಲ್ಲಿ ಆದಿ ದ್ರಾವಿಡ, ಛಲವಾದಿ ಆಂಧ್ರದ ಗಡಿಬಾಗಗಲ್ಲಿ ಮಾಲರು, ಭಾರತದಲ್ಲಿ 6000ಕ್ಕಿಂತ ಹೆಚ್ಚು ಉಪಜಾತಿಗಳಿವೆ ಅದೇ ರೀತಿ ಈ ಸಮುದಾಯವು ಹಲವು ಉಪಜಾತಿಗಳನ್ನು ಒಳಗೊಂಡಿದೆ ತಿಗಳ ಹೊಲೆಯ, ಗಂಡಿನಕಾರ ಹೊಲೆಯ, ಕಬ್ಬಟ್ಟಿ ಹೊಲೆಯ, ತೆಲುಗು ಹೊಲೆಯ, ಇತ್ಯಾದಿ.....

ಮದುವೆಯ ಸಂದರ್ಭಗಲ್ಲಿ ನಂಟಸ್ಥಿಕೆ ಮಾಡುವಾಗ ಪಂಡಗಗಳಿಗೆ ತಕ್ಕಂತೆ ವರ–ವಧುವನ್ನು ಸಂಬಂಧ ಬೆಳೆಸುತ್ತಾರೆ.

ಮೈಸೂರು ಜಿಲ್ಲೆ ಕೊಳ್ಳೆಗಾಲ ತಾಲೂಕಿನಲ್ಲಿ ಹೊಲೆಯರಲ್ಲಿ 12 ಕನ್ನಡ ಹೊಲೆಯ, ಕಪ್ಪೆ ಹೊಲೆಯ, ಕಂಬಟ್ಟೆ ಹೊಲೆಯ, ಕೊಂಗೊಲಯ ಹೊಲೆಯ, ಕೂಡಸಾಲ ಹೊಲೆಯ, ಗಟ್ಟಿ ಹೊಲೆಯ, ತೆಲುಗು ಹೊಲೆಯ, ಚಂಗ ಹೊಲೆಯ ಗಂಗಡಿಕಾರ ಹೊಲೆಯ, ಮನ್ನಾ ಹೊಲೆಯ, ಸಾಮಹೊಲೆಯ, ಉರಮೆ ಹೊಲೆಯ

ಕೊಡಗಿನಲ್ಲೂ ಹೊಲೆಯರಲ್ಲಿ ಕೆಂಬಟ್ಟಿ, ಮಾರಿಂಗಿ, ಮುಂಡ, ಕುಕ್ಕ, ಬಲಗೈ, ಎಡಗೈ, ಪಾಲೆ ಪಾಲೆ, ಮಾಯಲ್, ಆಡಿಯಾರ್, ಮರತ, ಕಾಲಾಡಿ, ಮಾದಲ್, ಹುಲಸವಾರ್, ಮದಲಾದವುಗಳು ಹೊಲೆಯರ ಹೊಲೆಯರ ಪಂಗಡಗಳು

**ಚಾರಿತ್ರಿಕ ಇತಿಹಾಸ**

ಈ ಸುಮುದಾಯಕ್ಕೆ ವಿಶೇಷವಾದ ಚಾರಿತ್ರಿಕ ಇತಿಹಾಸವೇ ಇದೆ ಪ್ರಮುಖವಾಗಿ ಹೇಳುವುದಾದರೆ ಸಾಹಿತ್ಯ, ಪುರಾಣ, ಐತಿಹಾಸಿಕ ಪುರಾವೆಗಳು ಈ ಸಮುದಾಯವನ್ನು ಕುರಿತು ಸಾಕ್ಷಾಧಾರಗಳನ್ನು ಒದಗಿಸಿಕೊಡುತ್ತವೆ. ಛಲವಾದಿ ಎಂಬುದು ಇದೊಂದು ಜಾತಿಯನ್ನು ಸೂಚಿಸುವ ಪದ, ಮೂಲದಲ್ಲಿ ಈ ಸಮುದಾಯವನ್ನು ಹೊಲೆಯ ಎಂದು ಕರೆಯುತ್ತಿದ್ದರು. ಛಲವಾದಿ ಎಂಬ ಪದ ಇತ್ತೀಚಿನ ದಿನಗಳಲ್ಲಿ ಬಳಕೆಯಲ್ಲಿ ಬಂದಿರುವ ಪದ ಇದಕ್ಕೆ ಸಂಬಂಧಿಸಿದಂತೆ ಅನೇಕ ಪುರಾಣದ ಕಥೆಗಳು ಕಂಡು ಬಂದಿವೆ. ಈ ಪದವೇ ಹೇಳುವಂತೆ ಛಲವಂತ ಹಠವಾದಿ ಎಂಬ ಅರ್ಥವನ್ನು ನೀಡುತ್ತದೆ. ಮುಖ್ಯವಾಗಿ ಹೇಳುವುದಾದರೆ ವೇದಗಳ ಕಾಲದಲ್ಲಿ ಯಾವುದೇ ರೀತಿಯ ಜಾತಿ ಸೂಚಕಗಳಿರಲಿಲ್ಲ ವರ್ಗಗಳಿದ್ದವು ಎಂಬುದು ಇತಿಹಾಸದ ಹಲವು ದಾಖಲೆಗಳು ತಿಳಿಸುತ್ತವೆ. ನಂತರದ ದಿನಗಳಲ್ಲಿ ಜಾತಿಗಳು ಹುಟ್ಟಿಕೊಂಡವು. ಅಂದಿನಿಂದ ಜಾತಿಗಳು ಉಪಜಾತಿಗಳು ಬಳಕೆಯಲ್ಲಿ ಇರುವುದು ನೋಡಿದ್ದೇವೆ. ಹಾಗಾಗಿ ಈಗ ಈ ಸಮುದಾಯ ಜಾತಿಯ ಸಂಕೋಲೆಯಿಂದ ಸಿಲುಕಿ ಸೌಲಭ್ಯಗಳಿಂದ ವಂಚಿತವಾಗಿದೆ. ಭಾರತದಲ್ಲಿ ಸಂವಿಧಾನದ ಕಾನೂನುಗಳು ಇಷ್ಟೂ ಪ್ರಭಲವಾಗಿದ್ದರೂ ಇನ್ನು ಕೆಳವರ್ಗದರ ಮೇಲೆ ದಬ್ಬಾಳಿಕೆ ನಡೆಯುತ್ತಲೇ ಇದೆ. ಅದರಲ್ಲಿ ಛಲವಾದಿ ಸಮುದಾಯವೂ ಒಂದು ಹಾಗಾಗಿ ಅನೇಕ ಛಲವಾದಿ ಸಮುದಾಯಗಳು ಅಭಿವೃದ್ಧಿ ಹೊಂದದೆ ಎಲೆಮರೆ ಕಾಯಿಯಾಗಿ ಭಯದ ವಾತಾವರಣದಲ್ಲಿ ಜೀವಿಸುತ್ತಿದ್ದಾರೆ.

**ಪೌರಾಣಿಕ ಮೂಲ**

ಯಾವುದೇ ಸಮುದಾಯದ ಮೂಲಗಳನ್ನು ತಿಳಿಯಬೇಕಾದರೆ ಕೆಲವು ಆಕರಗಳು ಬಹಳ ಮುಖ್ಯವಾಗುತ್ತವೆ. ಅವುಗಳೆಂದರೆ ಶಾಸನಗಳು ಪುರಾಣಗಳು, ಬರವಣಿಗೆಗಳು, ನಾಣ್ಯಗಳು ಸಾಹಿತ್ಯಿಕ ಆಕರಗಳು, ಜನಪದ ಕಥೆಗಳು, ಜನಪದ ಹಾಡು, ಒಗಟು, ವಚನಗಳು, ದಂತಕಥೆಗಳು ಐತಿಹ್ಯಗಳು ಮುಖ್ಯ ಆಧಾರಗಳಾಗಿ ಆ ಸಮುದಾಯಗಳ ಮೂಲ ಇತಿಹಾಸವನ್ನು ತಿಳಿಸು ಕೊಡುತ್ತವೆ. ಈ ಹಿನ್ನೆಲೆಯಲ್ಲಿ ಛಲವಾದಿ ಸಮುದಾಯವೂ ಒಂದು.

ಒಂದು ದಿನ ದಕ್ಷಬ್ರಹ್ಮನು ಒಂದು ಯಾಗವನ್ನು ಏರ್ಪಡಿಸಿದ್ದನು ಈ ಯಾಗಕ್ಕೆ ಪರಮೇಶ್ವರನೊಡನೆ ಸತಿಗೆ ಆಹ್ವಾನಿಸಿದ್ದರೂ ಆಕೆ ಬರದೆ ತನ್ನ ತಂದೆ ಜೊತೆ ಯಾಗಕ್ಕೆ ಹೋದಳು ಅಲ್ಲಿ ತಂದೆ–ತಾಯಿಗೆ ಆದ ಅವಮಾನವನ್ನು ತಾಳಲಾರದೆ ಅಗ್ನಿಗೆ ಹಾರಿ ಪ್ರಾಣಬಿಟ್ಟಳಂತೆ, ಇದರಿಂದ ಕೋಪಗೊಂಡ ಶಿವ ತದೇಕದೃಷ್ಟಿಯಿಂದ ಆಗಸವನ್ನು ನೋಡಿದನಂತೆ ಆಗ ವೀರಪುರುಷನೊಬ್ಬ ಹುಟ್ಟಿ ಶಿವಸ್ಮರಣೆ

ಮಾಡುತ್ತಾ ಭೂಮಿಗೆ ಪ್ರವೇಶ ಮಾಡಿದನಂತೆ ಆತನು ನಂದೀಶನಿಗೆ ಸಮಸ್ಕರಿಸಿ ನಿಂತನಂತೆ ಆಗ ಶಿವ ಆತನಿಗೆ ನಂದಿಜ ಅಥವಾ ಚಲದಂಕಮಲ್ಲ ಎಂದು ಹೆಸರಿಟ್ಟರಂತೆ ಈತನೆ ದಕ್ಷಬ್ರಹ್ಮನೊಡನೆ ಯುದ್ಧಮಾಡಿ ದಕ್ಷಬ್ರಹ್ಮನನ್ನು ಕೊಂದನು ದಕ್ಷಬ್ರಹ್ಮ ಸಾಯಿಯುವ ಸಮಯದಲ್ಲಿ ಇವನ ಕುಟುಂಬ ಏಳಿಗೆಯಾಗದಿರಲೆಂದು ಶಾಪ ಕೊಟ್ಟನಂತೆ ಛಲದಂಕನ ಶಿವಸ್ಮರಣೆ ತಪ್ಪಿದ್ದರಿಂದ ವಿಕಾರ ಹೊಂದಿ ಕಾಲಹರಣ ಮಾಡುತ್ತಿದ್ದನಂತೆ ಇದನ್ನು ನೋಡಿದ ನಾರದ ಆರು ಜನ ಋಷಿಗಳಿಂದ ಅವನ ಶಾಪವಿಮೋಚನೆಗೊಳಿಸಿನಂತೆ ಕೆಲವು ಮಂತ್ರಗಳನ್ನು ಜಪಿಸಲು ಹೇಳಿದರಂತೆ ಅದರಂತೆ ಮಾಡಿ ಒಳ್ಳೆಯ ಪರಾಕ್ರಮಿಯಾದನು ಆರು ಜನ ಋಷಗಳಿಗೆ ಭಂಗ ಮಾಡುತಿದ್ದ ಕ್ರೂರ ರಾಕ್ಷಸರನ್ನು ಇಂದ್ರಜಾಲ ಮಹಾಮಂತ್ರಶಾಸ್ತ್ರಗಳಿಂದ ಸಂಹಾರ ಮಾಡಿ ಗುರುಕಾಣಿಕೆ ನೀಡಿದನಂತೆ, ಆದರೆ ದೃಷ್ಟ ರಕ್ಷಸರು ಮತ್ತೆ ಛಲದಂಕಮಲ್ಲನಿಗೆ ಕಲಿತ ವಿದ್ಯೆಗಳು ಮತ್ತೆ ಮರೆತು ಹೋಗಲೆಂದು ಜಪಿಸಿದರಂತೆ ಮತ್ತೆ ಛಲದಂಕ ಶಾಪಗ್ರಸ್ತನಾದನಂತೆ. ತಾರಕಸೂರನ ಸಂಹಾರಕ್ಕಾಗಿ ಕುಮಾರಸ್ವಾಮಿಯವರ ಜನನ ಶಿವ–ಪಾರ್ವತಿಯರಿಂದಲೇ ನಡೆಯಬೇಕಿತ್ತು ಇದಕ್ಕಾಗಿ ದೇವತೆಗಳ ಸೂಚನೆಯಂತೆ ಮನ್ಮಥನು ಶಿವನ ತಪಸ್ಸು ಭಂಗ ಮಾಡಿದನಂತೆ ಶಿವ ಪಾರ್ವತಿಯ ಕೈಹಿಡಿಯಲು ಪ್ರೇರೇಪಿಸಿದನಂತೆ ಆಗ ಶಿವ ಮೂರನೇ ಕಣ್ಣು ತೆರೆದು ಮನ್ಮಥನನ್ನು ಬಸ್ಮಮಾಡಿದನಂತೆ ಆಗ ಮನ್ಮಥನ ಹೆಂಡತಿಯು ತನ್ನ ಗಂಡನನ್ನು ಬದುಕಿಸಿಕೊಡಲು ಕೇಳಿಕೊಂಡಳಂತೆ ಆಗ ಆ ಬೂದಿ ಗಂಗೆಯಲ್ಲಿ ಹಾಕವಂತೆ ಹೇಳಿದನಂತೆ ಶಾಪಗ್ರಸ್ತನಾದ ಛಲದಂಕಮಲ್ಲನು ಗಂಗೆಯಲ್ಲಿ ಮಿಂದು ಶಾಪವಿಮೋಚನೆಗೊಂಡನು. ನಂತರ ಮನ್ಮಥನು ಶಿವನನ್ನುಕುರಿತು ಉಗ್ರ ತಪಸ್ಸು ಮಾಡಿದ ಇದನ್ನು ಮೆಚ್ಚಿದ ಶಿವ ಛಲದಂಕಮಲ್ಲನಿಗೆ ಬ್ರಹ್ಮಕುಮಾರಿಯಾದ ಮಹಾದೇವಿಯೊಡನೆ ವಿವಾಹ ಮಾಡಿಸಿ ಮುಂದೆ ಇವರಿಬ್ಬರಿಗೂ ಹುಟ್ಟುವ ಸಂತತಿಯೇ ಛಲವಾದಿ ಸಮುದಾಯ ಎಂದು ವರವನ್ನು ನೀಡಿದ

**ಐತಿಹ್ಯ ಮೂಲ**

ಶಿವ ಪಾರ್ವತಿಯರು ದಿನ ನದಿಗೆ ಸ್ನಾನ ಮಾಡಲು ಹೋಗುತ್ತಿದ್ದರು. ಒಂದು ದಿನ ಪಾರ್ವತಿ ಮುಟ್ಟಾದಳು ಈ ಸಲದ ಮುಟ್ಟು ವಿಭಿನ್ನವಾಗಿತ್ತು. ಅದನ್ನು ಅವಳು ಒಂದು ಅರಿವೆಯಲ್ಲಿ ಮುದುರಿ ತೊಡೆಯಲ್ಲಿ ಇಟ್ಟುಕೊಂಡಳು. ನದಿಗೆ ಹೋಗುವ ದಾರಿಯಲ್ಲಿ ಒಂದು ದೊಡ್ಡ ಬಿರುಕು ಇತ್ತು ಆ ಬಿರುಕಿಗೆ ಮುಟ್ಟಿನ ಅರಿವೆ ಬಿದ್ದಿತು ಪಾರ್ವತಿ ಅದನ್ನು ನೋಡಲಿಲ್ಲ, ಅವಳು ನೇರವಾಗಿ ಸ್ನಾನಕ್ಕೆ ಹೋದಳು. ಸ್ನಾನ ಮುಗಿಸಿಕೊಂಡು ಶಿವ ಪಾರ್ವತಿ ಹಿಂತಿರಿಗಿ ಬರುವಾಗ ಆ ಬಿರುಕಿನಲ್ಲಿ ಒಂದು ಮಗು ಅಳುತ್ತಿರುವುದು ಕಾಣಿಸಿತ, ಮಗು ಎಷ್ಟು ಸುಂದರವಾಗಿದೆ ಎಂದು ಆ ಮಗುವನ್ನು ಮನೆಗೆ ಎತ್ತಿಕೊಂಡು ಬಂದು ಮನೆಯ ಬಾಗಿಲನ್ನು ಕಾಯಿವಂತೆ ಇರಿಸಿದಳು, ಅದರ ಜೊತೆಗೆ ಕಾಮಧೇನುವಿಗೆ ರಕ್ಷಣೆಯನ್ನು ಮಾಡಬೇಕು ಎಂದು ಹೇಳಿದಳು. ಆ ಮಗುವಿಗೆ ಯಾವುದೇ ಕಾರಣಕ್ಕೂ ಹಸುವಿಗೆ ಹಾಲು ತುಪ್ಪ ಕೊಡಬಾರದು ಎಂದು ಶಿವ ಪಾರ್ವತಿಗೆ ಹೇಳಿದನು. ಒಮ್ಮೆ ಹಾಲು ಕಾಯಿಸುವ ಪಾತ್ರೆಯನ್ನು ತೊಳೆಯುವಾಗ ಹಾಲಿನ ಕೆನೆ ಕೆಳಗೆ ಚೆಲ್ಲಿತ್ತು, ಕೆನೆ ಆ ಮಗುವಿನ ಕಣ್ಣಿಗೆ ಬಿತ್ತು ಅದನ್ನು ಎತ್ತಿ ತಿಂದಿತು. ಹಾಲಿನ ಕೆನೆಯೇ ಎಷ್ಟು ರುಚಿ ಇರಬೇಕಾದರೆ ಕಾಮಧೇನು ಎಷ್ಟು ರುಚಿ ಇರಬಹುದು ಎಂದು ಆ ದಿನ ದನ ಕಾಯಲು ಹೋದಾಗ ಆ ಕಾಮಧೇನುವನ್ನು ಕೊಂದು ತಿನ್ನುತ್ತಾನೆ, ಇದನ್ನು ತಿಳಿದ ಶಿವ ಅವನಿಗೆ ನೀನು ಚಾಂಡಾಲನಾಗಿ ಸ್ಮಶಾನದಲ್ಲಿ ಬಿದ್ದರು ಶಾಪ ಹಾಕಿದನು. ಆ ಕಾರಣದಿಂದಲೇ ಚಾಂಡಾಲರು ಸ್ಮಶಾನ ಒಡೆತನ ಪಡೆದರು. ಆ ಮುಗುವಿನ ಸಂತತಿಯರೇ ಛಲವಾದಿಗಳು ಹೇಳುತ್ತಾರೆ

**ಚರಿತ್ರೆಯಲ್ಲಿ ಛಲವಾದಿ ಮೂಲ**

ಛಲವಾದಿ ಸಮುದಾಯವು ತುಳಿತಕ್ಕೆ ಒಳಗಾದ ಸಮುದಾಯವಾಗಿದ್ದರಿಂದ ಈ ಸಮುದಾಯವನ್ನು ಕುರಿತು ಚರಿತ್ರೆಯಲ್ಲಿ ಅಷ್ಟೇನು ದಾಖಲಾಗಿಲ್ಲ ದಾಖಲಾದ ಅಂಶಗಳು ತೀರ ಕಡಿಮೆ. ಈ ಸಮುದಾಯಕ್ಕೆ ಯಾವುದೇ ಉನ್ನತ ಸ್ಥಾನಮಾನಗಳು ದೊರೆತಿರುವುದಿಲ್ಲ, ಆದರೂ ರಾಜರು ವಹಿಸಿದ ಕಾರ್ಯಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ ಎಂದು ಚರಿತ್ರೆಗಳು ಹೇಳುತ್ತವೆ. ಇವರನ್ನು ಕುರಿತಂತೆ ಕೆಲವು ಉಲ್ಲೇಖಗಳು ಲಭ್ಯವಾಗಿವೆ ಬಾದಾಮಿ ಚಾಲುಕ್ಯರ ದೊರೆ ಮಂಗಳೇಶನು 'ಮಾತಂಗ' ರಾಜನನ್ನು ಸೋಲಿಸಿದ್ದಾಗಿ ಬಾದಾಮಿ ಗುಹಾ ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿ ಮಾತಂಗ ಎಂದರೆ ಛಲವಾದಿ, ಹೊಲೆಯ ಸಮುದಾಯವೆಂದು ಉಲ್ಲೇಖವಿದೆ.

ಕವಿರಾಜ ಮಾರ್ಗ, ಜೈನರ ಭವಾವಳಿ, ಪಂಪನ ಕೃತಿಗಳಲ್ಲಿ, ನಾಗವರ್ಮನ ಕರ್ನಾಟಕ ಕಾದಂಬರಿಯಲ್ಲಿ, ನಯಸೇನನ ಕೃತಿಗಳಲ್ಲಿ ಹೀಗೆ ಹಲವು ಕೃತಿಗಳಲ್ಲಿ ಹೊಲೆಯರು ಹಾಗೂ ಮಾದಿಗರು ಕುರಿದಂತೆ ಉಲ್ಲೇಖಗಳು ಲಭಿಸಿವೆ. ಹನ್ನೆರಡನೇಯ ಶತಮಾನದಲ್ಲಿ ಕರ್ನಾಟಕದಲ್ಲಿ ಹೊಲೆಯ, ಮಾದಿಗರ ಹೀನಸ್ಥಿತಿಗಳನ್ನು ತಿಳಿಸಲಾಗಿದೆ. ಇದನ್ನು ಹೋಗಲಾಸಲು ತೀವ್ರವಾದ ಚಳುವಳಿ ಹುಟ್ಟಿಕೊಂಡಿತು ಅದರ ಫಲವಾಗಿಯೇ ಮಾದರ ಚೆನ್ನಯ್ಯ, ಡೋಹಾರ ಕಕ್ಕಯ್ಯ, ಮಾಡಿವಾಳ ಮಾಚಿಯ್ಯ ಅಂಬಿಗರ ಚೌಡಯ್ಯರು ಹೀನಸ್ಥಿತಿಯ ವಿರುದ್ಧ ಹೋರಾಡಿದರು. ಬಸವಣ್ಣನವರ ಅನೇಕ ವಚನಗಳಲ್ಲಿ ಹೊಲೆಯ, ಛಲವಾದಿ ಎಂಬ ಪದಗಳು ಬಳಕೆಯಾಗಿವೆ. ಚಿತ್ರದುರ್ಗದ ಮದಕರಿ ನಾಯಕರ ಆಳ್ವಿಕೆಯಲ್ಲಿ ಕಹಳೆ ಮಲ್ಲಪ್ಪ ಅವನ ಹೆಂಡತಿ ಒನಕೆ ಒಬವ್ವ ಛಲವಾದಿ ಸಮುದಾಯಕ್ಕೆ ಸೇರಿದವರು. ಇವಳ ಶೌರ್ಯ ಸಾಹಸವು ಕರ್ನಾಟಕ ಇತಿಹಾಸದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ

**ಉಪಸಂಹಾರ**

ಕರ್ನಾಟಕದಾದ್ಯಂತ ಛಲವಾದಿ ಸಮುದಾಯವು ತಮ್ಮದೆಯಾದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವುದು ಶ್ಲಾಘನೀಯವಾದದ್ದು ಮುಖ್ಯವಾಗಿ ಕುಲವೃತ್ತಿಯನ್ನು ಬಿಡದೆ ಸಾರ್ವಜನಿಕ ಸೇವೆಯನ್ನು ಮಾಡುತ್ತ ಬರುತ್ತಿದಾರೆ. ಮೈಸೂರು ಭಾಗದಲ್ಲಿ ಕನ್ನಡ ಹೊಲೆಯರು, ಕಪ್ಪೆ ಹೊಲೆಯರು, ಕೆಂಬಟ್ಟಿ ಹೊಲೆಯರು, ಕೊಂಗೊಲೆಯರು, ಕೂಡಸಾಲ ಹೊಲೆಯ, ಗಟ್ಟಿ ಹೊಲೆಯ, ತೆಲುಗು ಹೊಲೆಯ, ಚೆಂಗ ಹೊಲೆಯ, ಗಂಗಡಿಕಾರ ಹೊಲೆಯ, ಮನ್ನಾ ಹೊಲೆಯ, ಸಾಮ ಹೊಲೆಯ, ಉರುಮೆ ಎಂಬ 12 ಉಪಜಾತಿಗಳಿವೆ.

ಕೊಡಗಿನ ಭಾಗದಲ್ಲಿ ಕೆಂಬಟ್ಟಿ ಹೊಲೆಯರು, ಮಾಲಿಂಗ ಹೊಲೆಯರು, ಮುಂಡ ಹೊಲೆಯರು, ಕುಕ್ಕ ಹೊಲೆಯರು, ಪಾಲೆ ಹೊಲೆಯರು ಮಾಯಲ್ ಹೊಲೆಯರು, ಆಡಿಯರ್, ಕಾಲಡಿಮ ಮಾದಾಲ್, ಹುಲ ಸವಾರ್ ಎಂಬ ಉಪಜಾತಿಗಳು ಕಂಡು ಬರುತ್ತವೆ. ಉತ್ತರ ಕರ್ನಾಟಕದಲ್ಲಿ ಡಾಲಿ ಹೊಲೆಯ, ಕಾಳಿ ಹೊಲೆಯ, ಹೊಲೆಯದಾಸ್ ಬೇಗಾರ, ದೇವಟಿಗಿ, ಹೀಗೆ ಹಲವು ಉಪಜಾತಿಗಳಿರುವುದ ಕಂಡು ಬಂದಿದೆ. ಹಾಗೆಯೇ ಗಂಟೆ ಬಟ್ಟಲು ಛಲವಾದಿಗಳು ರಾಣಿಗ, ಪೋತುರಾಜ, ನಾಟೀಕಾರ, ಮೇತ್ರಿ ಗಣಾಚಾರಿ, ಎಂಬ ಹೆಸರುಗಳಿಂದ ಕರೆಯುತ್ತಿದ್ದಾರೆ. ಬಿಜಾಪುರ ಭಾಗದಲ್ಲಿ ಪೋತೆ, ಪೋತಾಗೋಳ್ ಎಂಬ ಮನೆತನಗಳು ಇರುವುದು ಕಂಡುಬಂದಿದೆ.

ಒಟ್ಟಾರೆಯಾಗಿ ಈ ಸಮುದಾಯವನ್ನು ಐತಿಹ್ಯಗಳ, ಪುರಾಣದ ಕತೆಗಳ, ಶಾಸನಗಳ, ರಾಜ ಮನೆತನಗಳ ಆಧಾರದ ಮೇಲೆ ಈ ಸಮುದಾಯದ ಕುಲಮೂಲಗಳನ್ನು ತಿಳಿಯಬಹುದಾಗಿದೆ.

**ಪರಾಮರ್ಶಕ ಗ್ರಂಥಗಳು**


1. ಎ. ಡಿ. ಕೃಷ್ಣಯ್ಯ, ಛಲವಾದಿ ಜನಾಂಗ, ಹೇಮಂತ ಪ್ರಕಾಶನ ಮೈಸೂರು, 1979
2. ಸಿಂಗೆ ಎಸ್. ಆರ್, ಹೊಲೆಯರ ಒಂದು ಅಧ್ಯಯನ ಸಂಶೋಧನಾ ಕೃತಿ, ಕರ್ನಾಟಕ ವಿಶ್ವಿದ್ಯಾಲಯ, ಧಾರವಾಡ, 1991
3. ಡಾ. ರಮೇಶ ಆರ್. ಛಲವಾದಿ ಸಮುದಾಯದ ಜನಪದ ಕಲೆಗಳು (ಅಪ್ರಕಟಿತ ಸಂಶೋಧನ ಮಹಾಪ್ರಬಂಧ), 2020.
4. ನಲ್ಲಿಕಟ್ಟೆ ಎಸ್ ಸಿದ್ದೇಶ್, ಛಲಬೇಕು ಶರಣಂಗೆ, ಸಾತ್ವಿಕ ಪ್ರಕಾಶನ, ಹೊಳಲ್ಕೆರೆ, 2002
5. ಸಜ್ಜನಕೆರೆ ಸಿದ್ಧಲಿಂಗಪ್ಪ, ಛಲವಾದಿ ಜನಾಂಗದ ವಿಶಿಷ್ಠ ವಿವಾಹ ಪದ್ಧತಿ, ಶ್ರೀಮತಿ ಸಾವಿತ್ರಮ್ಮ ಚನ್ನಬಸಪ್ಪ, ಮುಸ್ಟೂರು, 2014
6. ಅಥರ್ಗಾ ಗೀತಾ ಶ್ರೀಮಂತ, ಬಿಜಾಪುರ ಜಿಲ್ಲೆಯ ಛಲವಾದಿ ಮಹಿಳೆಯರ ಒಂದು ಸಾಂಸ್ಕೃತಿಕ ಅಧ್ಯಯನ, ಪಿ.ಹೆಚ್.ಡಿ. ಪ್ರಬಂಧ. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, 2020
7. ಕೇಶವ ಪ್ರಸಾದ, ಹೊಲೆಯ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ
8. ಎಂ. ಜಿ. ನಾಗರಾಜ, ಕೆಂಬಟ್ಟಿ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ
9. ಎಸ್. ಎಸ್. ಹಿರೇಮಠ, ದಲಿತ ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001